

# ಒಹಾಕಾ ಮೆಕ್ಸಿಕೊದ ಕಲಾನಗರಿ

**ಪ್ರತಿ ನಿತ್ಯ ಜನಜಾತ್ರೆ ಮತ್ತು ಕಲಾಜಾತ್ರೆಗಳಿಂದ ಕಂಗೊಳಿಸುವ ಒಹಾಕಾ ಮೆಕ್ಸಿಕೊ ದೇಶದ ಸಾಂಸ್ಕೃತಿಕ ನಗರಿಯೂ ಹೌದು.**

■ ಗಣೇಶ್ ನಾಯಕ್

ಮೆಕ್ಸಿಕೊದ ಪ್ರಮುಖ ನಗರ ಮತ್ತು ಕಲಾ ರಾಜಧಾನಿಯೆಂದು ಪ್ರಸಿದ್ಧವಾದ ಒಹಾಕಾ ಸಾಂಪ್ರದಾಯಿಕ, ಪರಂಪರಾಗತ ಕಲಾ ಪ್ರಕಾರಗಳ ಸಂಗಮ. ಸಾವಿರಾರು ಕರಕುಶಲ ಕಲಾವಿದರ ತವರು. ಮೋಹಕ ಮಾಯಾನಗರಿ.

ಮಹಾ ವೈಭವದ ಚರ್ಚುಗಳು, ಕಲಾತ್ಮಕ ಬೃಹತ್ ಚೌಕಗಳು, ಆಕರ್ಷಕ ವ್ಯಾಪಾರ ಕೇಂದ್ರಗಳು, ಚಾರಿತ್ರಿಕ ಬಾಟಿಕ್ ಹೋಟೆಲುಗಳು, ಹಲವು ಮ್ಯೂಸಿಯಂ–ಗಾಲ್ಯರಿಗಳು, ವಿಶಿಷ್ಟ ಕರಕುಶಲ ಮಳಿಗೆಗಳು, ನಾಲಗೆ ಮತ್ತು ಜಠರಗಳಿಗೆ ಮುದ ಕೊಡುವ ಸ್ಥಳೀಯ ಖಾದ್ಯ ಪಾನೀಯಗಳು, ಇವೆಲ್ಲವೂ ಸೇರಿ ಒಹಾಕಾ ಭೇಟಿ ಪ್ರವಾಸಿಗರಿಗೆ ವಿಶೇಷ ಅನುಭವ ಕಟ್ಟಿ ಕೊಡುತ್ತದೆ.

ನಮ್ಮ ದೇಶದ ಪಶ್ಚಿಮ ಬಂಗಾಳ, ಕೇರಳ, ಕರ್ನಾಟಕದಂತೆ ಸಾಹಿತ್ಯ, ಕಾವ್ಯ, ಸಂಗೀತ, ಸಿನಿಮಾಗಳಲ್ಲಿ ಹೊಸ ಪ್ರಯೋಗಗಳನ್ನು ಮಾಡುತ್ತ, ಸಾಂಸ್ಕೃತಿಕ ಬದುಕಿಗೆ ನವ ಆಯಾಮಗಳನ್ನು ನೀಡುತ್ತ ಬಂದಿರುವ ಒಹಾಕಾ ನಗರದ ಜನರ ಹುಮ್ಮಸ್ಸು, ಹುರುಪು, ಹೋರಾಟದ ಮನೋಪ್ರವೃತ್ತಿ, ಅಲ್ಲಿನ ಸುಂದರ ವಿಶಾಲ ಬೀದಿಗಳಲ್ಲಿ ಮೂಡಿ ಬಂದ ಬಹೃತ್ ರಸ್ತೆ ಚಿತ್ರಗಳಲ್ಲಿ ಸೂಕ್ತವಾಗಿ ಅಭಿವ್ಯಕ್ತಿಗೊಂಡಿದೆ.

ರಾಜಧಾನಿ ಮೆಕ್ಸಿಕೊ ನಗರದ ಸೆಂಟ್ರಲ್ ಬಸ್ ನಿಲ್ದಾಣದಿಂದ, ಲಕ್ಷುರಿ ಬಸ್ಸನೇರಿ ಬೆಳಿಗ್ಗೆ ಹತ್ತಕ್ಕೆ ಹೊರಟ ನಾನು, ಒಹಾಕಾ ನಗರ ತಲುಪಿದಾಗ ಸಂಜೆ ನಾಲ್ಕು. ಗುಡ್ಡ, ಕಣಿವೆಗಳ ಮೂಲಕ ಹಾದುಬರುವ ಹೆದ್ದಾರಿ ನಯನಮನೋಹರ ದೃಶ್ಯಗಳಿಂದ ಕೂಡಿದೆ. ಒಹಾಕಾ ನಗರದ ಮಧ್ಯ ಭಾಗದಲ್ಲೇ ಇದ್ದ ಸ್ವಚ್ಛ, ಸುಂದರ, ಸುಸಜ್ಜಿತ ವಸತಿ ಗೃಹವೊಂದರಲ್ಲಿ ತಂಗಿ, ಅಲ್ಲಿನ ಸೌಕರ್ಯಗಳನ್ನು ಸವಿಯುವ ಭಾಗ್ಯವೂ ನನ್ನದಾಯಿತು.

ಸಾಂತಾ ಡೊಮಿಂಗೊ ಚರ್ಚ್ ಒಹಾಕಾ ನಗರದ ಹತ್ತು ಹಲವು ಚರ್ಚುಗಳ ಪೈಕಿ ಮುಖ್ಯವಾದದ್ದು ಮತ್ತು ಪ್ರಸಿದ್ಧವಾದದ್ದು. 16ನೇ ಶತಮಾನದಲ್ಲಿ ನಿರ್ಮಿಸಲಾದ ಈ ದೇವಾಲಯ ಈಗಲೂ ದೃಢವಾಗಿದ್ದು, ಭವ್ಯವಾಗಿದೆ. ಹೊರಗಿನ ನಾಜೂಕಿನ ವಾಸ್ತುವಿನ ಜೊತೆಗೆ, ಒಳಾಂಗಣವೂ ಚಿತ್ರಗಳಿಂದ, ಸಂಕೀರ್ಣ ಕಲಾ ವಿನ್ಯಾಸಗಳಿಂದ ಕಂಗೊಳಿಸುತ್ತದೆ. ಸಂಜೆಯ ಆರಾಧನಾ ಸಮಯದಲ್ಲಿ ಹಚ್ಚುವ ಸಹಸ್ರ ದೀಪಗಳ ಪ್ರಭಾವಳಿ, ದಿವ್ಯ ಅನುಭೂತಿಯ

